# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 78(44) |
| ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ.ರಾಠೋಡ್ (ನಾಮನಿರ್ದೇಶಿತ ಸದಸ್ಯರು), |
| ಉತ್ತರಿಸುವ ದಿನಾಂಕ | : | 19/12/2022. |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಸಕಾಲ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಅನುದಾನಿತ ಶಾಲಾ ಕಾಲೇಜುಗಳಲ್ಲಿನ ಬೋಧಕರು ಹಾಗೂ ಬೋಧಕೇತರರಿಗೆ ಪಿಂಚಣಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ |
| ಆ) | 2006ರ ನಂತರ ಸೇವೆ ಸಲ್ಲಿಸುತ್ತಿರುವ ಬೋಧಕರು ಹಾಗೂ ಬೋಧಕೇತರರಿಗೆ ಎನ್.ಪಿ.ಎಸ್ ಅಥವಾ ಓ.ಪಿ.ಎಸ್ ಸೌಲಭ್ಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೆ ಪಿಂಚಣಿ ಒದಗಿಸುವ ಕುರಿತು ಸರ್ಕಾರದ ಆದೇಶ ಸಂಖ್ಯೆ: FD (SPL)04 PET 2005, ದಿನಾಂಕ: 31.03.2006ರ ಕ್ರಮ ಸಂಖ್ಯೆ: 08ರಲ್ಲಿ ಈ ಕೆಳಗಿನಂತೆ ಆದೇಶಿಸಿದೆ.<br><br>...(8) ಸಹಾಯಾನುದಾನ ಶಿಕ್ಷಣ ಸಂಸ್ಥೆಗಳ ನೌಕರರಿಗೆ, ಗೊತ್ತು ಮಾಡಿದ ಪ್ರಯೋಜನ ಪಿಂಚಣಿಯನ್ನು ದಿನಾಂಕ:01.04.2006 ರಂದು ಅಥವಾ ಅದರ ತರುವಾಯ ಸೇರುವ ಹೊಸದಾಗಿ ನೇಮಕಗೊಂಡ ಸಿಬ್ಬಂದಿಗೆ ನಿಲ್ಲಿಸಿ ಬಿಡತಕ್ಕದ್ದು. ನೂತನ ನಿಗಧಿತ ವಂತಿಗೆ ಪಿಂಚಣಿ ಯೋಜನೆಯು, ಆಯ್ಕೆಯ ಅವಕಾಶದ ಆಧಾರದ ಮೇಲೆ ನೌಕರನಿಗೆ ಮತ್ತು ನಿಯೋಜಕನಿಗೆ ಅನ್ವಯವಾಗತಕ್ಕದ್ದು ಮತ್ತು ಆಯ್ಕೆಯ ಅವಕಾಶವನ್ನು ಇಬ್ಬರಿಂದಲೂ ಚಲಾಯಿಸತಕ್ಕುದು. ಆದರೆ, ನಿಯೋಜಕರ ವಂತಿಗೆಯನ್ನು ಸಂಬಂಧಪಟ್ಟ ಸಂಸ್ಥೆಗಳು ಭರಿಸತಕ್ಕುದು. ಆದರೆ ರಾಜ್ಯ ಸರ್ಕಾರವಲ್ಲ.<br><br>• ಈ ಆದೇಶವು ದಿನಾಂಕ: 01/04/2006ರಿಂದ ಜಾರಿಗೆ ಬಂದಿರುತ್ತದೆ. |
| ಇ) | ನಿವೃತ್ತಿ ನಂತರ ಪಿಂಚಣಿ ಸೌಲಭ್ಯವಿಲ್ಲದೇ ತೊಂದರೆಯನ್ನು ಅನುಭವಿಸುತ್ತಿರುವ ಈ ಹಿರಿಯ ನಿವೃತ್ತ ನೌಕರರಿಗೆ ಪಿಂಚಣಿ ಸೌಲಭ್ಯವನ್ನು ನೀಡುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? | |

| | | |
|---|---|---|
| | | • ದಿನಾಂಕ: 01/04/2006ರ ನಂತರ ಅನುದಾನಸಹಿತ ಅನುಮೋದನೆಗೊಂಡ ಅನುದಾನಿತ ಖಾಸಗಿ ಶಾಲೆ/ ಕಾಲೇಜುಗಳಲ್ಲಿನ ಸಿಬ್ಬಂದಿಗಳಿಗೆ ಈ ಮೇಲಿನ ನಿಯಮ ಅನ್ವಯವಾಗುತ್ತದೆ.<br>• ಅನುದಾನಿತ ಸಿಬ್ಬಂದಿಗಳ ಸೇವಾ ಸೌಲಭ್ಯಗಳು ಅನುದಾನಸಹಿತವಾಗಿ ಅನುಮೋದನೆಗೊಂಡ ದಿನಾಂಕದಿಂದ ಅನ್ವಯವಾಗುತ್ತದೆ. ಆದುದರಿಂದ 2006 ರ ಪೂರ್ವದಲ್ಲಿ ಅನುದಾನರಹಿತವಾಗಿ ನೇಮಕಗೊಂಡ ಸಿಬ್ಬಂದಿಗಳು ದಿನಾಂಕ: 01/04/2006ರ ನಂತರ ಅನುದಾನಕ್ಕೆ ಒಳಪಟ್ಟಲ್ಲಿ ಅಂತಹ ಸಿಬ್ಬಂದಿಗಳು ಹೊಸ ಪಿಂಚಣಿ ಯೋಜನೆ (NPS) ವ್ಯಾಪ್ತಿಗೆ ಒಳಪಡುತ್ತಾರೆ.<br>• ಮೇಲೆ ತಿಳಿಸಿರುವ ಅಂಶಗಳಿಗೆ ಒಳಪಟ್ಟು ಅನುದಾನಿತ ಸಿಬ್ಬಂದಿಗಳು ಇಚ್ಛೆ ಪಟ್ಟಲ್ಲಿ NPS ಯೋಜನೆಗೆ ಒಳಪಡಿಸಬಹುದಾಗಿದೆ.<br>• ಈ ಪಿಂಚಣಿ ಯೋಜನೆಯು ಸಂಪೂರ್ಣವಾಗಿ ಸ್ವ-ಇಚ್ಛಾ (optional) ನೆಲೆಯಲ್ಲಿ ಜಾರಿಗೊಳಿಸುವುದರಿಂದ ಕಡ್ಡಾಯಗೊಳಿಸಲು ಅವಕಾಶವಿರುವುದಿಲ್ಲ. |

ಸಂಖ್ಯೆ: ಇಪಿ 621 ಎಸ್‌ಇಎಸ್ 2022

(ಬಿ.ಸಿ.ನಾಗೇಶ್)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ
ಹಾಗೂ ಸಕಾಲ ಸಚಿವರು